<u>**3** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು</u>

<u>ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ</u>

<u>**C.C. No. 2242/2024**</u>

**CW- 3** **PW:2**

| | |
|---|---|
| ಸಾಕ್ಷಿಯ ಹೆಸರು | ಃ ಮಂಜುನಾಥ ಕಲಾಲ |
| ತಂದೆ /ಗಂಡನ ಹೆಸರು | ಃ ತಮ್ಮಣ್ಣಾ |
| ವಯಸ್ಸು | ಃ 32 ವರ್ಷ |
| ಉದ್ಯೋಗ | ಃ ವ್ಯಾಪಾರ |
| ವಾಸಸ್ಥಳ | ಃ ಹಳೇ ಹುಬ್ಬಳ್ಳಿ |

ದಿಃ **31.12.2024.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ ಃ**

ಸಾಕ್ಷಿಗೆ ದಾಳಿ ನಿಪಿ.1 ಪಂಚನಾಮೆ ತೋರಿಸಲಾಗಿ ಅದರಲ್ಲಿ ತನ್ನ ಸಹಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆ ಜೊತೆ ಇರುವ ನಕಾಶೆಯನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಮಾಡಿರುವ ದಿನಾಂಕ ಸಮಯ ಹಾಗೂ ಸ್ಥಳ ನನಗೆ ಗೊತ್ತಿಲ್ಲ. ಯಾವ ಕಾರಣಕ್ಕಾಗಿ ನಿಪಿ.1 ಹಾಗೂ 2 ದಾಖಲೆಗಳ ಮೇಲೆ ಪೊಲಿಸರು ನನ್ನ ಸಹಿ ಪಡೆದಿರುತ್ತಾರೆಂದು ನನಗೆ ಗೊತ್ತಿಲ್ಲ. ಪೊಲಿಸರು ಹೇಳಿದ ಮೆರೆಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಗೆ ನಿಪಿ.3 ಮತ್ತು 4 ಪೊಟೊಗಳನ್ನು ತೊರಿಸಲಾಗಿ ಅವುಗಳಲ್ಲಿ ತಾನು ಇರುವುದಾಗಿ ಗುರುತಿಸಿರುತ್ತಾರೆ. ನಿಪಿ.3 ಮತ್ತು 4 ಪೊಟೊಗಳನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ಈ ಮುಂಚೆ ನೋಡಿಲ್ಲ. ನಿಪಿ.1 ಮತ್ತು 2 ದಾಖಲೆಗಳಿಗೆ ನನ್ನ ಜೊತೆ ಮತ್ತೆ ಯಾರು ಸಹಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಎ.ಪಿ.ಪಿ. ಯವರಿಂದಃ ಆರೋಪಿ ಪರ ವಕೀಲರಿಂದಃ**

ದಿಃ 10.05.2024 ರಂದು ಪೊಲಿಸರು ನನ್ನನ್ನು ಹಾಗೂ ಚಾಸಾಃ 2 ರವರನ್ನು ನವನಗರ ಎಪಿಎಂಸಿ ಪೊಲಿಸ್ ಠಾಣೆಗೆ ಕರೆಯಿಸಿ ಪ್ರಕರಣದ ವಿಷಯ ತಿಳಿಸಿ ನಮ್ಮಿಬ್ಬರನ್ನು ಪಂಚರಾಗಲು

ಕೇಳಿಕೊಂಡರು. ಹಾಗೂ ಅದಕ್ಕೆ ನಾವು ಒಪ್ಪಿಕೊಂಡು ಅಲ್ಲಿಂದ ರಾತ್ರಿ 9.30 ಗಂಟೆ ಸುಮಾರಿಗೆ ಘಟನಾ ಸ್ಥಳಕ್ಕೆ ಹೋಗಿ ನೋಡಿದಾಗ ಒಬ್ಬ ವ್ಯಕ್ತಿ ಕೆ ಎಸ್ ಎಲ್ ಯು ಕಂಪೌಂಡ ಗೋಡೆಗೆ ಮರೆಯಾಗಿ ದ್ವಿಚಕ್ರ ವಾಹನ ನಿಲ್ಲಿಸಿ ತನ್ನ ಹತ್ತಿರ ಇರುವ ಪ್ಲಾಸ್ಟಿಕ ಚೀಲದಲ್ಲಿ ಇಟ್ಟಿದ್ದ ಮದ್ಯದ ಟೆಟ್ರಾಪ್ಯಾಕೇಟಗಳನ್ನು ಜಪ್ತು ಮಾಡುವ ಸಮಯದಲ್ಲಿ ರಾತ್ರಿ 9.45 ರಿಂದ 11.00 ಗಂಟೆಯವರೆಗೆ ನಿಪಿ.1 ರ ಪ್ರಕಾರ ಜಪ್ತು ಪಂಚನಾಮೇ ಜರುಗಿಸಿರುತ್ತಾರೆ ಸ ದರಿ ಸಮಯದಲ್ಲಿ ನಿಪಿ.2 ರ ಪ್ರಕಾರ ನಕಾಶೆ ತೆಗೆದಿರುತ್ತದೆ ಹಾಗೂ ನಾನು ಸ್ಥಳದಲ್ಲಿಯೆ ಹಾಜರಿದ್ದು ನಿಪಿ.1 ಮತ್ತು 2 ದಾಖಲೆಗಳಿಗೆ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನಿಪಿ.3 ಮತ್ತು 4 ಪೊಟೊಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನಿಪಿ.1 ರಲ್ಲಿ ತೋರಿಸಿರುವ ಅನುಕ್ರಮ ಸಂಖ್ಯೆ 1 ರಿಂದ 50 ಹೊಂದಿರುವ Double Kick fine whisky ಒಟ್ಟು 50 ಟೆಟ್ರಾಪ್ಯಾಕೇಟಗಳನ್ನು ನ್ಯಾಯಾಲಯದ ಮುಂದೆ ಇರುವ ಆರೋಪಿ ಕಡೆಯಿಂದ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.1 ರಿಂದ 4 ರಲ್ಲಿ ಇರುವ ಎಲ್ಲಾ ವಿಷಯ ಗೊತ್ತಿದ್ದರು ಸಹ ಆರೋಪಿಗೆ ಸಹಾಯವಾಗಲಿ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿಸವಾಲುಃ ಆರೋಪಿ ಪರ ವಕೀಲರು ಗೈರು ಹಾಜರಿದ್ದು ಪಾಟಿಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**(**ಶ್ರೀಮತಿ ದೀಪಾ ಜಿ ಮನೇರಕರ**)**
**3** ನೇ ಅಧಿಕ ಹಿ**.**ದಿ**.**ನ್ಯಾ**.**ಹುಬ್ಬಳ್ಳಿ**.**

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**C.C. No. 2242/2024**

**CW- 2** **PW:1**

ಸಾಕ್ಷಿಯ ಹೆಸರು ಃ ಕಾಶಿನಾಥ ಕಲಾಲ
ತಂದೆ /ಗಂಡನ ಹೆಸರು ಃ ರಾಜಾರಾಮ
ವಯಸ್ಸು ಃ 40 ವರ್ಷ
ಉದ್ಯೋಗ ಃ ಕೂಲಿ ಕೆಲಸ
ವಾಸಸ್ಥಳ ಃ ಅಮರಗೋಳ, ಹುಬ್ಬಳ್ಳಿ

ದಿಃ **31.12.2024.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ ಃ**

ಸಾಕ್ಷಿಗೆ ದಾಳಿ ಪಂಚನಾಮೆ ತೋರಿಸಲಾಗಿ ಅದರಲ್ಲಿ ತನ್ನ ಸಹಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆ ಜೊತೆ ಇರುವ ನಕಾಶೆಯನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಸುತಗಟ್ಟಿ ರಸ್ತೆ ಹತ್ತಿರ ಸುಮಾರು 4-5 ತಿಂಗಳುಗಳ ಹಿಂದೆ ರಾತ್ರಿ ಸಮಯದಲ್ಲಿ ಮಾಡಿರುತ್ತೇನೆ. ಯಾವ ಕಾರಣಕ್ಕಾಗಿ ನಿಪಿ.1 ಹಾಗೂ 2 ದಾಖಲೆಗಳ ಮೇಲೆ ಪೊಲಿಸರು ನನ್ನ ಸಹಿ ಪಡೆದಿರುತ್ತಾರೆಂದು ನನಗೆ ಗೊತ್ತಿಲ್ಲ. ಪೊಲಿಸರು ಹೇಳಿದ ಮೇರೆಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಗೆ 2 ಪೊಟೊಗಳನ್ನು ತೊರಿಸಲಾಗಿ ಅವುಗಳಲ್ಲಿ ತಾನು ಇರುವುದಾಗಿ ಗುರುತಿಸಿದ್ದು ಪೊಟೊಗಳನ್ನು ಕ್ರಮವಾಗಿ ನಿಪಿ.3 ಮತ್ತು 4 ಎಂದು ಗುರುತಿಸಲಾಯಿತು. ನಿಪಿ.3 ಮತ್ತು 4 ಪೊಟೊಗಳನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆಂದು ನನಗೆ ಗೊತ್ತಿಲ್ಲ. ಪೊಲಿಸರು ನನ್ನ ಸಮಕ್ಷಮ ಯಾವದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ಈ ಮುಂಚೆ ನೋಡಿಲ್ಲ. ನಿಪಿ.1 ಮತ್ತು 2 ದಾಖಲೆಗಳಿಗೆ ನನ್ನ ಜೊತೆ ಮತ್ತೆ ಯಾರು ಸಹಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಎ.ಪಿ.ಪಿ. ಯವರಿಂದಃ ಆರೋಪಿ ಪರ ವಕೀಲರಿಂದಃ**

ದಿಃ 10.05.2024 ರಂದು ಪೊಲೀಸರು ನನ್ನನ್ನು ಹಾಗೂ ಚಾಸಾಃ 3 ರವರನ್ನು ನವನಗರ ಎಪಿಎಂಸಿ ಪೊಲೀಸ್ ಠಾಣೆಗೆ ಕರೆಯಿಸಿ ಪ್ರಕರಣದ ವಿಷಯ ತಿಳಿಸಿ ನಮ್ಮಿಬ್ಬರನ್ನು ಪಂಚರಾಗಲು ಕೇಳಿಕೊಂಡರು. ಹಾಗೂ ಅದಕ್ಕೆ ನಾವು ಒಪ್ಪಿಕೊಂಡು ಅಲ್ಲಿಂದ ರಾತ್ರಿ 9.30 ಗಂಟೆ ಸುಮಾರಿಗೆ ಘಟನಾ ಸ್ಥಳಕ್ಕೆ ಹೋಗಿ ನೋಡಿದಾಗ ಒಬ್ಬ ವ್ಯಕ್ತಿ ಕೆ ಎಸ್ ಎಲ್ ಯು ಕಂಪೌಂಡ ಗೋಡೆಗೆ ಮರೆಯಾಗಿ ದ್ವಿಚಕ್ರ ವಾಹನ ನಿಲ್ಲಿಸಿ ತನ್ನ ಹತ್ತಿರ ಇರುವ ಪ್ಲಾಸ್ಟಿಕ ಚೀಲದಲ್ಲಿ ಇಟ್ಟಿದ್ದ ಮದ್ಯದ ಟೆಟ್ರಾಪ್ಯಾಕೇಟಗಳನ್ನು ಜಪ್ತು ಮಾಡುವ ಸಮಯದಲ್ಲಿ ರಾತ್ರಿ 9.45 ರಿಂದ 11.00 ಗಂಟೆಯವರೆಗೆ ನಿಪಿ.1 ರ ಪ್ರಕಾರ ಜಪ್ತು ಪಂಚನಾಮೆ ಜರುಗಿಸಿರುತ್ತಾರೆ ಸದರಿ ಸಮಯದಲ್ಲಿ ನಿಪಿ.2 ರ ಪ್ರಕಾರ ನಕಾಶೆ ತೆಗೆದಿರುತ್ತದೆ ಹಾಗೂ ನಾನು ಸ್ಥಳದಲ್ಲಿಯೆ ಹಾಜರಿದ್ದು ನಿಪಿ.1 ಮತ್ತು 2 ದಾಖಲೆಗಳಿಗೆ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನಿಪಿ.3 ಮತ್ತು 4 ಪೊಟೊಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನಿಪಿ.1 ರಲ್ಲಿ ತೋರಿಸಿರುವ ಅನುಕ್ರಮ ಸಂಖ್ಯೆ 1 ರಿಂದ 50 ಹೊಂದಿರುವ Double Kick fine whisky ಒಟ್ಟು 50 ಟೆಟ್ರಾಪ್ಯಾಕೇಟಗಳನ್ನು ನ್ಯಾಯಾಲಯದ ಮುಂದೆ ಇರುವ ಆರೋಪಿ ಕಡೆಯಿಂದ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.1 ರಿಂದ 4 ರಲ್ಲಿ ಇರುವ ಎಲ್ಲಾ ವಿಷಯ ಗೊತ್ತಿದ್ದರು ಸಹ ಆರೋಪಿಗೆ ಸಹಾಯವಾಗಲಿ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿಸವಾಲುಃ ಆರೋಪಿ ಪರ ವಕೀಲರು ಗೈರು ಹಾಜರಿದ್ದು ಪಾಟಿಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-
(ಶ್ರೀಮತಿ ದೀಪಾ ಜಿ ಮನೇರಕರ)
**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.